Doc 10B
1-P-2

Reg. No. B G 155 24-6-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಆದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ತರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಸಹಸ್ರಗಟ್ಟೆ ತೆಲಂಗಾಣಾ ಸತ್ಯಾಗ್ರಹಿಗಳ ಬಂಧನ

"ಸತ್ಯವಾದಿ"ಯ ಸ್ವರ್ಣೋತ್ಸವ

"ಸತ್ಯವಾದಿ"ಯ ಸ್ವರ್ಣೋತ್ಸವವನ್ನು ಬೇಗನೇ ಸಿದ್ಧವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶ್ರೀ ಶ್ರೀ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂದೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ತಕ್ಷಣವೇ ಇಲ್ಲ

ಹೈದರಾಬಾದು— ಆಂಧ್ರಪ್ರದೇಶದಲ್ಲಿ ತಕ್ಷಣವೇ ಅಧ್ಯಕ್ಷರ ಆಡಳಿತ ಜಾರಿ ಮಾಡುವ ವಿಷಯವಾಗಲೀ ಪ್ರತ್ಯೇಕ ತೆಲಂಗಾಣ ಸ್ಥಾಪಿಸುವ ವಿಷಯವಾಗಲೀ ತಕ್ಷಣಕ್ಕಿಲ್ಲವೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಹೇಳಿದರು.

ಅಧ್ಯಕ್ಷರ ಅನುಮತಿ

ನವದೆಹಲಿ— ಕಂಪೆನಿಗಳು ರಾಜಕೀಯ ಪಕ್ಷಗಳಿಗೆ, ರಾಜಕೀಯ ಕಾರಣಕ್ಕಾಗಿ ವ್ಯಕ್ತಿ ಅಥವಾ ಸಂಸ್ಥೆಗಳಿಗೆ ಡಾನೆರ್ಷ ಕೊಡುವದನ್ನು ಪ್ರತಿಬಂಧಿಸುವ ಮಸೂದೆಗೆ ರಾಷ್ಟ್ರಾಧ್ಯಕ್ಷರ ಅನುಮತಿ ದೊರೆಯಿತು.

★

1 ಲಕ್ಷ ಪ್ರೇಕ್ಷಕರು

ಕೇಪ್ ಕೆನಡಿ— ಜುಲೈ 16 ರಂದು ಚಂದ್ರನಲ್ಲಿಗೆ ಪ್ರಯಾಣ ಮಾಡುವ 3 ಮಂದಿ ಗಗನಯಾಮಿಗಳಿರುವ ಅಪೋಲೋ 11 ರಂದು ಹೊರಡುವದನ್ನು ನೋಡಲು 1 ಲಕ್ಷ ಪ್ರೇಕ್ಷಕರು ಆಗಮಿಸಲಿದ್ದಾರೆ !

★

ಸ್ವಾರಸ್ಯ ಪ್ರಕರಣ

ನವದೆಹಲಿ— ವಿದೇಶೀ ಪ್ರವಾಸಿಕರಿಂದ ಭಾರತವು ರೂ. 25 ಕೋಟಿ ಸಂಪಾದಿಸುತ್ತಿದ್ದರೂ ಅದರಲ್ಲಿ ಶೇಕಡ 40 ರಷ್ಟು ಮಾಯವಾಗುತ್ತಿದೆಯಂತೆ !

★

ನೀರಿನ ಚಿಲುಮೆ

ಮದರಾಸು— ಜರ್ಮನ್ ಡೆಮೊಕ್ರಾಟಿಕ್ ರಿಪಬ್ಲಿಕ್ಕಿನ ಹಾವೇ ನಗರವು ಮದರಾಸಿನ ರಿಪ್ಪರ್ಬಿಲ್ಡಿಂಗಿನಲ್ಲಿ ಇಡಲು 80 ಅಡಿ ಎತ್ತರದ ನೀರಿನ ಚಿಲುಮೆಯನ್ನು ಉದಾರ ದಾನಾ ಮಾಡಿದೆ.

★

ಇವರಂಥ ಪೋಲೀಸಿನವರು

ಬೊಂಬಾಯಿನಿಂದ ಡೆಲ್ಲಿಗೆ ತೆರಳುತ್ತಿದ್ದ ಒಂದು ಸಂಸಾರದ 4 ಮಂದಿಯನ್ನು ಯಾರೋ ಹೊಡೆಯುತ್ತಿದ್ದುದನ್ನು ಪ್ರೇಕ್ಷಕರಂತೆ ನೋಡುತ್ತಿದ್ದ 5 ಮಂದಿ ಪೋಲೀಸರು ಕರ್ತವ್ಯ ಲೋಪ, ಅಲಕ್ಷ್ಯದ ಆಪಾದನೆ ಮೇಲೆ ಸಸ್ಪೆಂಡಾಗಿದ್ದಾರೆ

ನಟ ಸಂಗೀತಗಾತಿ ಆರ್ಲೆಂಡ್

ಲಂಡನ್— 47 ವರ್ಷದ ನಟ-ಸಂಗೀತಗಾತಿ ಜೂಡಿ ಗಾರ್ಲೆಂಡ್ ಅವಳ ಕೊಠಡಿಯಲ್ಲಿ ಸತ್ತು ಬಿದ್ದಿದ್ದನ್ನು ಕಂಡ ಅವಳ ಗಂಡ ಮಿಕ್ಕಿ ಡೀನ್ಸ್ ಪೋಲೀಸರಿಗೆ ತಿಳಿಸಿದನು ; ಗಾರ್ಲೆಂಡ್ ತನಗಿಂತ 11 ವರ್ಷ ಚಿಕ್ಕವನಾದ ಡೀನ್ಸನ್ನು ಮಾರ್ಚಿಯಲಿ ಮದುವೆಯಾಗಿದ್ದಳು ; ಇದು ಅವಳಿಗೆ 5 ನೇ ಮದುವೆ !

★

ಲಯನ್ಸ್ ಕ್ಲಬ್

ಟೋಕಿಯೊ— ಲಯನ್ಸ್ ಕ್ಲಬ್ಬಿನ 52 ನೇ ಅಂತರಾಷ್ಟ್ರೀಯ ವಾರ್ಷಿಯ ಸಮ್ಮೇಳನವು ಇಲ್ಲಿ ಜುಲೈ 2 ರಿಂದ 5 ರವರಿಗೆ ನಡೆಯುವುದು.

●

ಕಪ್ಪು ಬಾವುಟ

ಕಿರ್ಲೋಸ್ಕರವಾಡಿ (ಸಾಂಗ್ಲಿ)— ಕುಂಡಾಲರೋಡು ಜಂಕ್ಷನ್ನಿನ ಮೂಲಕ ಗೃಹಮಂತ್ರಿ ಶ್ರೀ ಜೆವರ್ ಹೋದಾಗ 550 ಮಂದಿ ಸಂಪೂರ್ಣ ಮಹಾರಾಷ್ಟ್ರ ಸ್ವಯಂಸೇವಕರು ಗಲಾಟೆಯಿಂದ ಕೂಡಿದ ಪ್ರದರ್ಶನ ನಡೆಸಿ ಕಪ್ಪು ಬಾವುಟ ಅಲ್ಲಾಡಿಸಿದರು.

★

ಹುಡುಗಿಯರನ್ನು ಪೇಚಾಡಿಸಿದ್ದಕ್ಕೆ

ಬೆಳಗಾಂ— ಸುಭಾಷ ದತ್ತಾತ್ರೇಯ ಪುರೋಹಿತನೆಂಬ ವಿದ್ಯಾರ್ಥಿಗೆ ರೂ 100 ಜುಲ್ಮಾನೆ ವಿಧಿಸಲಾಯಿತು — ಈತನು ಇಬ್ಬರು ಕಾಲೇಜು ಹುಡುಗಿಯರನ್ನು ಇಬ್ಬರು ಹುಡುಗರಿಗೆ ಇಂಥಾ ದಿವಸ ಇಂಥಾ ಕಡೆ ಮದುವೆಯೆಂದು 'ಲಗ್ನಪತ್ರಿಕೆ ಹೊರಡಿಸಿ, ಮತ್ತು ಆ ಹುಡುಗಿಯರು ಇಂಥಾ ದಿವಸ "ತಾದ್ಮಾದ್" ಮರಾಠಿ ನಾಟಕದಲ್ಲಿ ಅಭಿನಯಿಸುವರೆಂದು ಹಸ್ತಪತ್ರಿಕೆ ಹೊರಡಿಸಿ ಆ ಹುಡುಗಿಯರಿಗೆ ಪೇಚಾಟ ಉಂಟುಮಾಡಿದ ಅಪರಾಧಕ್ಕೆ ಈ ಶಿಕ್ಷೆ.

ಸಹಸ್ರಗಟ್ಟಿ ಸತ್ಯಾಗ್ರಹಗಳ ಬಂಧನ

ಹೈದರಾಬಾದು— ಪ್ರತ್ಯೇಕ ತೆಲಂಗಾಣಕ್ಕಾಗಿ ನಿನ್ನೆ ಹೈದರಾಬಾದು, ಸಿಕಿಂದರಾಬಾದು ಮತ್ತು ಅನೇಕ ತೆಲಂಗಾಣಾ ಜಿಲ್ಲೆಗಳಲ್ಲಿ ಸಹಸ್ರಗಟ್ಟಿ ಜನರು ಸಾಮೂಹಿಕ ಸತ್ಯಾಗ್ರಹ ನಡೆಸಿದರು — 2000 ಮಂದಿ ಬಂಧಿಸಲ್ಪಟ್ಟರು — ಇಲ್ಲೀವರೆಗೆ 25000 ಕ್ಕೂ ಹೆಚ್ಚು ಜನ ಸತ್ಯಾಗ್ರಹ ನಡೆಸಿರುವದಾಗಿ ತೆಲಂಗಾಣಾ ಪ್ರಜಾ ಸಮಿತಿ ಹೇಳಿಕೆ.

★

ಚಿನ್ನದ ಬೀಗದಕೈ

ಟೋಕಿಯೊ— ಭಾರತ ಪ್ರಧಾನಿ ಇಂದಿರಾರವರಿಗೆ ಪೌಂಡಳಿತ ಮುಖ್ಯಾಧಿಕಾರಿ ಮಿ|| ರಿಯೋಕೆಚ್ ಮಿನೋಬೆಯವ ಒಂದು ಪುಟ್ಟ ಸಮಾರಂಭದಲ್ಲಿ ಟೋಕಿಯೋದನ ಚಿನ್ನದ ಬೀಗದಕೈ ಇತ್ತು ಅಲ್ಲಿಯ ಗೌರವ ಪೌರರನ್ನಾಗಿ ಸನ್ಮಾನಿಸಿದರು

★

ಕೇರಳ ಚಳವಳಿ

ಕೊಚ್ಚಿ— ಮಲಾವುರದ ಚಳವಳಿಯನ್ನು, ತಪ್ಪು ಸರಿಪಡಿಸುವವರೆಗೆ, ತೀವ್ರಗೊಳಿಸಲಾಗುವುದೆಂದು ಜನಸಂಘ ಕಾರ್ಯದರ್ಶಿಯವರು ಹೇಳಿದರು — ನಿನ್ನೆ ಪಿಕೆಟಿಂಗಿನಲ್ಲಿ 39 ಮಂದಿ ಬಂಧಿಸಲ್ಪಟ್ಟರು

●

ವಿದ್ಯಾರ್ಥಿಗಳ ವಿರೋಧ

ಬೆಂಗಳೂರು — ರಾಜಕಾರಣಿಗಳು ವಿದ್ಯಾರ್ಥಿಗಳ ವಿಷಯಗಳಲ್ಲಿ ಕೈಹಾಕುವುದನ್ನು ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಸಂಘ ವಿರೋಧಿಸಿದೆ.

★

ಮಕ್ಕಳನ್ನು ಭಾವಿಗೆ ಎಸೆದ

ಶಿವಮೊಗ್ಗ— ಹೊಸೂರು ಗ್ರಾಮದ ರಾಘವೇಂದ್ರರಾವ್ ಎಂಬಾತನು ತನ್ನ 3 ಮಕ್ಕಳನ್ನು ಭಾವಿಗೆ ತಳ್ಳಿ ತಾನು ಭಾವಿಯಲ್ಲಿ ಬಿದ್ದ.

ಪುರುಷಸೂಕ್ತ

ಸಂಗ್ರಾಹಕರು :
ಅ. ನ. ಅಯ್ಯಂಗಾರ್

[ಮುಂದುವರಿದುದು]

ಚತುರ್ಮುಖನು ಮನುಷ್ಯರನ್ನು ಸೃಷ್ಟಿಸಿದಾಗ ಮುಖ, ಬಾಹು, ತೊಡೆಗಳು ಮತ್ತು ಕಾಲುಗಳಿಂದ ಯ್ಯಾರು ಉತ್ಪನ್ನರಾದರೆಂದರೆ—

ಬ್ರಾಹ್ಮಣರು ಚತುರ್ಮುಖನ ಮುಖದಿಂದ ಉತ್ಪನ್ನನಾದನು ; ಕ್ಷತ್ರಿಯನು ಬಾಹುವಿನಿಂದ ಉತ್ಪನ್ನನಾದನು ; ತೊಡೆಗಳಿಂದ ವೈಶ್ಯನು ಉತ್ಪನ್ನನಾದನು ; ಪಾದಗಳಿಂದ ಶೂದ್ರನು ಉತ್ಪನ್ನನಾದನು.

ಈ ಚತುರ್ಮುಖರೂಪಧರನಾದ ಭಗವಂತನ ಮನಸ್ಸಿನಿಂದ ಚಂದ್ರನೂ, ನೇತ್ರಗಳಿಂದ ಸೂರ್ಯನೂ, ಇಂದ್ರ ಮತ್ತು ಅಗ್ನಿಗಳು ಮುಖದಿಂದಲೂ, ಪ್ರಾಣದಿಂದ ವಾಯುವೂ ಉತ್ಪನ್ನರಾದರು.

ದೇಹದ ಮಧ್ಯಪ್ರದೇಶವಾದ ನಾಭಿ ಪ್ರದೇಶದಿಂದ ಸೂರ್ಯಾಂಡಗೋಳಗಳಿಗೆ ಮಧ್ಯವೇಶರೂಪವಾದ ಅಂತರಿಕ್ಷವು ಉತ್ಪನ್ನವಾಯಿತು. ಶಿರಸ್ಸಿನಿಂದ ದ್ಯುಲೋಕವೂ, ಪಾದಗಳಿಂದ ಭೂಮಂಡಲವೂ, ಕರ್ಣಗಳಿಂದ ದಿಕ್ಕುಗಳೂ ಉಂಟಾದವು. ಪೂರ್ವಕಲ್ಪರೀತ್ಯಾ ಅಂತರಕ್ಷಾದಿ ಚತುರ್ದಶಲೋಕಗಳನ್ನೂ ಕಲ್ಪಿಸಿದನು.

ಭಗವತ್ಸಂಕಲ್ಪದಿಂದ ಸರ್ವಜ್ಞನಾದ ನಾನು, ಸರ್ವಜ್ಞನಾಗಿಯೂ, ಸರ್ವಶಕ್ತನಾಗಿಯೂ, ಸರ್ವಜಗದಂತರಾತ್ಮನಾಗಿಯೂ, ಮೋಕ್ಷಪ್ರದನಾಗಿಯೂ, ಭೂಭವ್ಯೆ ವಿಭೂತಿವಿಶಿಷ್ಟನಾಗಿಯೂ ಇರುವ, ಅಪರಿಚ್ಛೇದ್ಯಸ್ವರೂಪ, ಗುಣ, ವಿಭೂತಿಕ್ತನಾಗಿ ಸರ್ವಸ್ಮಾತ್ಪರನಾದ ನಾರಾಯಣನನ್ನು ತಿಳಿದಿರುವೆನು (ಎಂದು ವೇದಪುರುಷನನ್ನು ಹೇಳುತ್ತಾನೆ). ಭಗವದ್ದಿವ್ಯಮಂಗಳವಿಗ್ರಹವು ಸೂರ್ಯಸಮಾನವರ್ಣವುಳ್ಳದ್ದಾಗಿರುವುದು.

ಗಾಂಧೀಜೀ ಅಮೃತವಾಣಿ

ಸತ್ಯದ ಆರಾಧಕನು ಸಂಪ್ರದಾಯಕ್ಕೆ ವಿರುದ್ಧವಾಗಿ ನಡೆದುಕೊಳ್ಳಬಾರದು.

ಆಶೋಕ ಪಿಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳೂ ಸನ್ನಿಧಿ ದೊರೆಯುತ್ತವೆ

Protect the Cow

SHAKTI SUDHA

A Superb Tonic

ಪುಡ್‌ಲ್ಯಾಂಡ್ಸ್ ಜಯಪ್ರದ 5 ನೇ ವಾರ

ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

.... ನೋಡಲು ತಪ್ಪಬೇಡಿ ....

ದುನಿಯಾ Duniya

ಪಾತ್ರ– ದೇವಾನಂದ್, ವೈಜಯಂತಿಮಾಲಾ, ಜಾನಿವಾಕರ್, ಬಾಲರಾಜ್ ಸಹಾನಿ

ತಾ|| 23-5-69 ರಿಂದ ಪ್ರವೇಶದರಗಳನ್ನು ಕೆಳಗೆನಮೂದಿಸಿರುವಂತೆ ಬದಲಾಯಿಸಿದೆ

ಬಾಕ್ಸ್ ರೂ 2–90, ಬಾಲ್ಕನಿ ರೂ 2–05, ಕೆಳಗಡೆ ರೂ 1–20, 0–75

[ದಿನ 3 ಪ್ರದರ್ಶನಗಳು]

ಅಪೆರಾ— 22-6-69 ರಿಂದ

.... ಮನಮೋಹಕ ತಮಿಳು ಚಿತ್ರ ....

ಮಹಾದೇವಿ

ಹೊಸ ಕಾಪಿ

ಪಾತ್ರ — ಎಂ ಜಿ ರಾಮಚಂದ್ರ ಸಾವಿತ್ರಿ
ವೀರಪ್ಪ ಚಂದ್ರಬಾಬು
ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4